

ಡಾ.ವಿನೋದ ಛೆಬ್ಬಿ

**ಬಾಲ್ಯದಿಂದಲೇ ಆಗುವ ಲೈಂಗಿಕ ಅನುಭವ-ಅನಿಸಿಕೆಗಳನ್ನು ತಮಗೆ ತಿಳಿದಂತೆ ಅರ್ಥೈಸುವುದು ಸಹಜ ಎಂಬುದು ಎಷ್ಟು ಜನರಿಗೆ ಗೊತ್ತಿದೆ?**

# 141: ಪರಸಂಬಂಧಗಳು-4

ಪರಸಂಬಂಧಗಳು ಸಂಗಾತಿಗಳು ಇಲ್ಲಿಯ ತನಕ ಪರಸ್ಪರರಿಂದ ಮುಚ್ಚಿಟ್ಟಿರುವ ವಿಷಯಗಳನ್ನು ಹೊರತೆಗೆದು ಪರಿಶೀಲಿಸಲು ಅನುವು ಮಾಡಿಕೊಡುತ್ತದೆ ಎಂದು ಹೋದಸಲ ಮಾತಾಡಿಕೊಳ್ಳುತ್ತಿದ್ದೆವು. ಸಾಮಾನ್ಯ ಸಂಬಂಧಗಳಲ್ಲಿ ಅದೇಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಪರಿಶೀಲಿಸೋಣ.

ದಾಂಪತ್ಯದಲ್ಲಿ ಸಂಗಾತಿಗಳು ಪರಸ್ಪರ ಲೈಂಗಿಕವಾಗಿ ವರ್ತಿಸುವುದಕ್ಕೂ ಅವರಿರುವ ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಜನರು ತಾವಿರುವ ಸಮಾಜದ ಪರಿಸರ ಹಾಗೂ ಸಂಪ್ರದಾಯಗಳ ಪ್ರಭಾವಕ್ಕೆ ಒಳಪಟ್ಟು ಬೆಳೆಯುತ್ತಾರಷ್ಟೆ? ಪ್ರತಿ ಸಮಾಜದಲ್ಲೂ ಸಭ್ಯತೆಗೆ ಹೆಚ್ಚು ಮಹತ್ವವಿದೆ. ಅದು ಹೇಗೋ ಗೊತ್ತಿಲ್ಲ. ಆದರೆ ಆರೋಗ್ಯಕರ ಲೈಂಗಿಕತೆಯ ಮುಕ್ತ ಅಭಿವ್ಯಕ್ತಿಯು ಈ ಸಭ್ಯತೆಯ ಮೇರೆಯನ್ನು ಮೀರುತ್ತದೆ ಎಂದು ನಂಬಲಾಗುತ್ತದೆ! ಹಾಗಾಗಿಯೇ ಸಭ್ಯತೆಯ ಹೆಸರಲ್ಲಿ ಲೈಂಗಿಕ ಅಭಿವ್ಯಕ್ತಿಯನ್ನು ಹತ್ತಿಕ್ಕುವುದನ್ನು, ಮರೆಮಾಚುವುದನ್ನು ಕಲಿಯುತ್ತೇವೆ. ಉದಾರಣೆಗೆ; ಚಿಕ್ಕ ಮಗುವೊಂದು ಅಮಾಯಕತೆಯಿಂದ ಬೆತ್ತಲೆ ಓಡಾಡುವಾಗ, ಛೀ, ಅಸಹ್ಯ, ಮುಚ್ಚಿಕೋ ಎಂದು ಕಟ್ಟಪ್ಪಣೆ ಕೊಡುತ್ತೇವಷ್ಟೆ? ಆಗ ಮಗುವು ಭಯ, ಅಭದ್ರತೆಗೆ ಒಳಗಾಗಿ ಅವಹೇಳನ, ನಾಚಿಕೆ, ಸಂಕೋಚ ಹುಟ್ಟಿಸಿಕೊಳ್ಳುತ್ತದೆ. ಇದೇ ಮುಂದೆ ಮೌಢ್ಯ, ಬಿಗುಮಾನ, ಹಾಗೂ ಮಡಿವಂತಿಕೆ ಆಗುತ್ತದೆ. ಮುಂದೆ ಸಹಜ ಕಾಮವು ತಲೆಯೆತ್ತಿದಾಗ ರೋಚಕತೆಯ ಜೊತೆ ಜೊತೆಗೆ ತಪ್ಪಿತಸ್ಥ ಭಾವವೂ ಕಾಣುತ್ತದೆ. ಸಹಜಕಾಮವನ್ನು ಆರೋಗ್ಯಕರ ರೀತಿಯಿಂದ ಹೇಗೆ ವ್ಯಕ್ತಪಡಿಸಬೇಕು ಎಂಬುದನ್ನು ಕಲಿಯಬೇಕೆಂದರೆ ಒಳ್ಳೆಯ ಮಾದರಿ ಬೇಕು. ಹಿರಿಯರ ಮಾದರಿಯನ್ನು ಅನುಸರಿಸಬೇಕೆಂದರೆ ಅವರದೂ ಕದ್ದು ಮುಚ್ಚಿ ನಡೆಯಬೇಕಾದ ಚಟುವಟಿಕೆ ಆಗಿದೆ. ನಮ್ಮಲ್ಲಂತೂ ಹೆಚ್ಚಿನ ತಾಯ್ತಂದೆಯರು ಮರೆಯಲ್ಲಿ ಪ್ರೀತಿಸುತ್ತಾರೆ, ಆದರೆ ಬಹಿರಂಗವಾಗಿ ಜಗಳವಾಡುತ್ತಾರೆ. ಬಾಲ್ಯದಲ್ಲಿ ಕಲಿಯುವ ಉತ್ಸುಕತೆ ತೋರಿಸಿದರೆ, 'ನಿನಗೇನೂ ತಿಳಿಯುವುದಿಲ್ಲ' ಎನ್ನುತ್ತಾರೆ. ಹದಿವಯಸ್ಸಿನಲ್ಲಿ, 'ನೀನೇನೂ ತಿಳಿದುಕೊಳ್ಳಬಾರದು' ಎನ್ನುತ್ತಾರೆ. ಮದುವೆಯ ಕಾಲ ಬಂದಾಗ, 'ನಿನಗೆಲ್ಲವೂ ತಿಳಿದಿದೆ' ಎನ್ನುತ್ತಾರೆ. ಮೊನ್ನೆ ನಾನು ಧಾರವಾಡದಲ್ಲಿ ಸಾರ್ವಜನಿಕರಿಗೆಂದು ನಡೆಸಿಕೊಟ್ಟ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಎದ್ದುಕಂಡಿದ್ದು ಏನೆಂದರೆ, ನಮ್ಮಲ್ಲಿ ಹಿರಿಯರಿಗೂ ಆರೋಗ್ಯಕರ ಲೈಂಗಿಕ ವರ್ತನೆಯ ಬಗೆಗೆ ತಿಳಿವಳಿಕೆ ಕಡಿಮೆಯಿದೆ. ಹೆಚ್ಚಿನ ತಾಯ್ತಂದೆಯರಿಗೆ ಗೊತ್ತಿರುವುದು ಸಂಭೋಗದ ಹೊರತಾಗಿ ಮತ್ತಿನ್ನೇನೂ ಇಲ್ಲ. ಹಾಗಾಗಿ ಮಕ್ಕಳೆದುರು ಲೈಂಗಿಕತೆಯ ಬಗೆಗೆ ಮಾತಾಡಬೇಕೆಂದರೆ ಸಂಭೋಗದ ನೆನಪಾಗಿ ಹೃದಯ ಬಾಯಿಗೆ ಬರುತ್ತದೆ. ಹಾಗಾಗಿ ಮಕ್ಕಳೂ ಕೂಡ ಯಾವುದೇ ಕಾಮರಹಿತ ಲೈಂಗಿಕ ವರ್ತನೆಯನ್ನು ಕೂಡ ಸಂಭೋಗವೆಂದೇ ಲೆಕ್ಕಮಾಡುತ್ತಾರೆ. ಲೈಂಗಿಕತೆಯ ಅಭಿವ್ಯಕ್ತಿಯಲ್ಲಿ ಸಂಭೋಗವೂ ಒಂದು ಸರಿ, ಆದರೆ ಅದೇ ಎಲ್ಲವೂ ಅಲ್ಲವಲ್ಲ?

ಮದುವೆ ಆಗಲಿರುವ ಬಹುತೇಕ ಹುಡುಗ– ಹುಡುಗಿಯರು ಲೈಂಗಿಕ ವಿಷಯಗಳ ಬಗೆಗೆ ತಾವೇ ಮಾತು ಶುರುಮಾಡಬೇಕಾಗುತ್ತದೆ. ಇದರಲ್ಲೂ ಒಂದು ಅಡ್ಡಿಯಿದೆ. ಒಬ್ಬರು ಪ್ರಾಮಾಣಿಕವಾಗಿ ತನ್ನ ಮುಂಚಿನ ಜೀವನದ ಬಗೆಗೆ (ಬಡತನ, ಹಿಂಸೆ), ಹಾಗೂ ಮುಂದಿನ ಸುಖದ ಕಲ್ಪನೆಗಳ ಬಗೆಗೆ (ಮನೆ/ತೋಟ ಮಾಡಬೇಕು, ವಿದೇಶದಲ್ಲಿ ನೆಲೆಸಬೇಕು) ಮಾತಾಡುತ್ತಿದ್ದರೆ ಇನ್ನೊಬ್ಬರು ಆಲಿಸುತ್ತಾರೆ. ಆದರೆ, ನನಗೆ ಇಂತಿಂಥ ಕಾಮದ ಬಯಕೆಗಳಿವೆ, ಅಥವಾ ನನ್ನ ಭಾವೀ ಕಾಮಜೀವನ ಹೀಗಿರಬೇಕು ಎಂದು ಮಾತು ತೆಗೆದರೆ ಸಾಕು, ಒಂದೋ, ತಾನು ಇಂಥವರಿಗೆ ಸಂಗಾತಿಯಾಗಲು ತಕ್ಕವನೇ/ಳೇ ಎಂದು ಸಂದೇಹಿಸಿ ಹಿಂತೆಗೆಯುತ್ತಾರೆ, ಅಥವಾ ಕಾಮುಕತನ ಎಂದೆನಿಸಿ ಭಯಪಟ್ಟು ದೂರವಾಗುತ್ತಾರೆ. ತನ್ನ ಮುಂಚಿನ ಲೈಂಗಿಕ ಅನುಭವದ ಬಗೆಗೆ ಹೇಳಿಕೊಂಡರಂತೂ ಕಟ್ಟಿಕೊಳ್ಳಲು ಹೊರಟ ಸಂಬಂಧವೇ ಮುರಿದುಬೀಳುತ್ತದೆ. ಬಾಲ್ಯದಲ್ಲಿ ಶಿಕ್ಷಕ/ಶಿಕ್ಷಕಿಯರ ಮೇಲೆ ಆಕರ್ಷಣೆ ಉಂಟಾಗಿದ್ದು, ಕದ್ದು ನೀಲಿಚಿತ್ರ ನೋಡಿದ್ದು ಮುಂತಾದ ಅಮಾಯಕ ಅನುಭವಗಳು ಕೂಡ ಗೂಢ ಎನ್ನಿಸಿಕೊಳ್ಳುತ್ತ ಹುತ್ತಕಟ್ಟಿಸಿಕೊಳ್ಳುತ್ತವೆ. ಇಲ್ಲೊಬ್ಬಳು ಚಿಕ್ಕವಳಿದ್ದಾಗ ತನ್ನ ತಾಯ್ತಂದೆಯರು ಸಂಭೋಗ ನಡೆಸುವಾಗ ಆಕಸ್ಮಿಕವಾಗಿ ನೋಡಿದ್ದನ್ನು ಅರ್ಥಮಾಡಿಕೊಳ್ಳಲಾಗದೆ ದಿಗ್ಭ್ರಮೆಗೊಂಡಿದ್ದಾಳೆ. ನಂತರ ಆಕೆಯನ್ನು ಮದುವೆಯಾಗುವ ಸೋದರಮಾವ ಇವಳ ಹತ್ತಿರ ಸಂಭೋಗದ ಬಗೆಗೆ ಮಾತಾಡಿದಾಗ, ಆಕೆ, ತನ್ನ ಹೆತ್ತವರು ಒಳಗೊಂಡಿದ್ದನ್ನು ನೆನಪಾಗಿ, ಸಂಭೋಗವೆಂದರೆ ಇದೆಯಾ? ಎಂದು ದಿಗ್ಭ್ರಮೆಯಿಂದ ಕೇಳಿದ್ದಾಳೆ. ಅವನು, 'ಎಂಥಾ ಅಸಹ್ಯಕರ ಮಾತಾಡುತ್ತಿದ್ದೀಯಾ!' ಇವಳನ್ನು ಬಯ್ದು ಮದುವೆಯನ್ನು ರದ್ದು ಮಾಡಿಕೊಂಡಿದ್ದಾನೆ. ಲೈಂಗಿಕತೆಯ ಅನುಭವ– ಅನಿಸಿಕೆಗಳು ಬಾಲ್ಯದಿಂದಲೇ ಶುರುವಾಗುತ್ತವೆ, ಹಾಗೂ ಅವುಗಳನ್ನು ತಮತಮಗೆ ತಿಳಿದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು ಎಲ್ಲರಿಗೂ ಸಹಜ ಎನ್ನುವುದು ಎಷ್ಟು ಜನರಿಗೆ ಗೊತ್ತಿದೆ?

ಇನ್ನು ಬಹುತೇಕರಿಗೆ ವೈವಾಹಿಕ ಚೌಕಟ್ಟಿನೊಳಗೂ ತಮ್ಮ ಒಳಗುದಿಯನ್ನು ತೆರೆದಿಡಲು ಅವಕಾಶ ಆಗುವುದಿಲ್ಲ. ಉದಾಹರಣೆಗಾಗಿ, ಒಬ್ಬಳು ಮೊದಲ ಗಂಡನಿಂದ ಎರಡು ಸಲ ಬಸಿರಾಗಿ ಗರ್ಭಪಾತ ಮಾಡಿಸಿಕೊಂಡಿದ್ದು, ಅದನ್ನು ಒಂದು ಸಲ ಎಂದು ಎರಡನೆಯ ಗಂಡನ ಹತ್ತಿರ ಹೇಳಿಕೊಂಡಿದ್ದಳು. ಸತ್ಯ ಹೊರಬಂದು ಮೋಸಗಾರ್ತಿ ಅನ್ನಿಸಿಕೊಂಡಳು. ಆಕೆ ನನ್ನಲ್ಲಿ ಹೇಳಿಕೊಂಡಿದ್ದು ಕಣ್ಣು ತೇವ ಆಗುವಂತಿತ್ತು. ಆಕೆ ಮೊದಲ ಹುಡುಗನನ್ನು ಮದುವೆಯಾಗುವ ಮುಂಚೆ ಅಮಾಯಕತೆಯಿಂದ ಒಪ್ಪಿಸಿಕೊಂಡು ಅವನಿಂದ ಗರ್ಭಿಣಿಯಾಗಿದ್ದಳು, ಹಾಗಾಗಿ ಅಯೋಗ್ಯನಾದರೂ ಅವನನ್ನೇ ಮದುವೆಯಾಗುವ ಪ್ರಸಂಗ ತಂದುಕೊಂಡಿದ್ದಳು. ಹಿಂಸೆ ತಡೆಯಲಾರದೆ ವಿಚ್ಛೇದನ ಪಡೆದುಕೊಂಡಿದ್ದಳು. ತನ್ನ ಕತೆಯನ್ನು ಎರಡನೆಯ ಗಂಡನೆದುರು ತೆರೆದಿಡಲು ಮನಸ್ಸು ಬರಲಿಲ್ಲ. ಗರ್ಭಧಾರಣೆ ಹಾಗೂ ಗರ್ಭಪಾತದಂಥ ವಿಷಯಗಳು – ಅದೂ ಮದುವೆಯಿಲ್ಲದೆ ನಡೆಯುವುದು – ಹೆಣ್ಣಿನ ಮೇಲೆ ಎಷ್ಟು ಸೂಕ್ಷ್ಮ ಪರಿಣಾಮ ಬೀರುತ್ತದೆ ಎಂಬುದನ್ನು ನಮ್ಮಲ್ಲಿ ಗಂಡಸರಿಗೆ ಯಾರೂ ಹೇಳಿಕೊಡುವುದಿಲ್ಲ. ಈಗವಳು ತನ್ನನ್ನು ಅರ್ಥಮಾಡಿಕೊಳ್ಳುವ ಮೂರನೆಯವನ ಬಗೆಗೆ ಮನಸ್ಸು ಕೊಡುತ್ತಿರುವುದನ್ನು ಕಂಡುಹಿಡಿದು, ಚರಿತ್ರಹೀನೆ, ಇನ್ನೊಮ್ಮೆ ಬಸಿರಾಗಲು ಹೊರಟಿದ್ದಾಳೆ ಎಂದು ಗಂಡ ತಿರಸ್ಕಾರದಿಂದ ನನ್ನಲ್ಲಿ ಎಳೆದು ತಂದಿದ್ದಾನೆ. ಸಂಗಾತಿಯ ಮುಂದೆ ಸೂಕ್ಷ್ಮ ಮನಸ್ಸನ್ನು ಬಿಚ್ಚಿದರೆ, 'ನಾನೇನು ಕಡಿಮೆ ಮಾಡಿದ್ದೆ?' ಎಂಬ ಅಸಂಬದ್ಧ ವಾದವನ್ನು ಎದುರಿಸಬೇಕಾಗುತ್ತದೆ. ಅಷ್ಟಲ್ಲದೆ ಮುಂದೆ ಸದಾ ಸಂಗಾತಿಯ ಕಣ್ಗಾವಲಲ್ಲಿ ಇರಬೇಕಾಗುತ್ತದೆ. ಆಡಲಾಗದ್ದನ್ನು ಅನುಭವಿಸಲು ಹೊರಟು ಪರಸಂಬಂಧದಲ್ಲಿ ರಹಸ್ಯವಾಗಿ ತೊಡಗುವುದು ಒಂದು ರೀತಿಯಲ್ಲಿ ಅನಿವಾರ್ಯ ಆಗುತ್ತದೆ.

ಮತ್ತೊಂದು ಸಂಗತಿ ಏನೆಂದರೆ, ನಾವು ಸಂಗಾತಿಯನ್ನು ಆರಿಸಿಕೊಳ್ಳುವಾಗ ಸಾಮಾಜಿಕ ಹಾಗೂ ಬೌದ್ಧಿಕ ಅಳತೆಗೋಲುಗಳನ್ನು ಉಪಯೋಗಿಸುತ್ತೇವೆ. ಆದರೆ ಹೀಗೆ ಸರಿಕಂಡ ವ್ಯಕ್ತಿಯು ಮನೋಲೈಂಗಿಕ ದೃಷ್ಟಿಯಲ್ಲೂ ಸರಿಹೊಂದಬೇಕೆಂದಿಲ್ಲ. ಲೈಂಗಿಕವಾಗಿ ಮುಕ್ತಮನಸ್ಸಿನಿಂದ ವ್ಯವಹರಿಸಿ, ಸರಿಕಂಡವರನ್ನು ಆಯ್ಕೆಮಾಡಿಕೊಳ್ಳುವ ವ್ಯವಸ್ಥೆಯು ನಮ್ಮಲ್ಲಿಲ್ಲ. ಹಾಗೆ ಮಾಡಲು ಹೊರಟರೆ ಸ್ವೇಚ್ಛಾಚಾರಕ್ಕೆ ಹಾದಿಯಾಗಿ ಸಮಾಜ ಘಾತುಕವಾಗುತ್ತದೆ. ಪಾಶ್ಚಾತ್ಯರಲ್ಲಿ ಲೈಂಗಿಕ ಹೊಂದಾಣಿಕೆಯನ್ನು ಕಂಡು ಒಪ್ಪಿದ ದಾಂಪತ್ಯಗಳಲ್ಲೂ ಪರಸಂಬಂಧ ನಡೆಯುತ್ತದೆ ಎಂದರೆ ಲೈಂಗಿಕ ಸಂಬಂಧಗಳಲ್ಲಿ ನಡೆಯಬಾರದ್ದು ನಡೆಯುತ್ತಿರುವುದರ ಜೊತೆಗೆ ನಡೆಯಬೇಕಾದದ್ದು ಏನೋ ನಡೆಯುತ್ತಿಲ್ಲ ಎನ್ನುವಂತಿದೆ.

ಅದೇನೆಂಬುದನ್ನು ಮುಂದಿನ ಸಲ ನೋಡೋಣ.